# ವಾರ್ತಾ ವಿಶ್ಲೇಷಣೆ

## ವೃಂದಾವನವಾಯಿತೇ ಕನ್ನಡನಾಡು

ಕರ್ನಾಟಕದ ಜನತೆಯು ಹೆಮ್ಮೆ ಪಡುವಂತಹ ಒಂದು ಅದ್ಭುತ ಕಾರ್ಯಕ್ರಮ, ಹೊಸನಗರ ರಾಮಚಂದ್ರಾಪುರ ಮಠದ '**ವಿಶ್ವ ಗೋ ಸಮ್ಮೇಳನ**'. ಎಲ್ಲ ಪತ್ರಿಕೆಗಳೂ ಕಾರ್ಯಕ್ರಮದ ವಿವರಗಳನ್ನು ಪ್ರಕಟಿಸಿವೆ. ನಮ್ಮ ಭಾರತೀಯ ಗೋ ತಳಿಗಳ ಬಗ್ಗೆ ಮಾಹಿತಿ ನೀಡುವ ಇಂತಹ ಒಂದು ವಿಚಾರಸಂಕಿರಣ ಹಾಗೂ ಸಮ್ಮೇಳನವನ್ನು ಮೊಟ್ಟ ಮೊದಲ ಬಾರಿಗೆ ಅತ್ಯದ್ಭುತ ರೀತಿಯಲ್ಲಿ ಆಯೋಜಿಸಿರುವ ಪೂಜ್ಯ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಕಲ್ಪನೆ ಹಾಗೂ ಪರಿಶ್ರಮ ಶ್ಲಾಘನೀಯ.

ವಿದೇಶಿ ಸಂಸ್ಕೃತಿಯನ್ನೇ ಅನುಕರಿಸುತ್ತ, ಅವರಲ್ಲಿರುವುದೆಲ್ಲ ಶ್ರೇಷ್ಠ, ನಮ್ಮದೆಲ್ಲ ಕಳಪೆ ಎಂಬ ಮನೋಭಾವನೆ ಭಾರತೀಯ ಜನಮಾನಸದಲ್ಲಿ ಆಳವಾಗಿ ಬೇರೂರಿದೆ. ಈ ದಾಸ್ಯಪ್ರವೃತ್ತಿಯಿಂದಾಗಿ ನಮ್ಮಲ್ಲಿರುವ ಅನೇಕ ಉತ್ತಮ ವಿಚಾರಗಳನ್ನು, ರೀತಿ-ನೀತಿಗಳನ್ನು, ಸಂಪತ್ತನ್ನು ನಿರ್ಲಕ್ಷಿಸಿ, ಕಂಗಾಲಾಗಿ ಅಲೆಯುತ್ತಿದ್ದೇವೆ. ಈ ನೈಜ್ಯಾನುಸಂಧಾನ ನಮ್ಮಲ್ಲಿರುವ ತನಕ ನಾವು ಏನನ್ನೂ ಸಾಧಿಸಲಾರೆವು. ಭಿಕ್ಷುಕನೆಂದೂ ಸಂತೃಪ್ತನಾಗಲಾರ. ನಮ್ಮ ತಾಯಿ ಭಾರತಿ ನೀಡಿರುವ ಪ್ರಕೃತಿಸಂಪತ್ತಿನ ವೈವಿಧ್ಯ ಮತ್ತಾವ ರಾಷ್ಟ್ರದಲ್ಲೂ ಇಲ್ಲ. ಆಧುನಿಕ ವಿಧಾನಗಳಿಂದ ನಮ್ಮಲ್ಲಿರುವ ಅನರ್ಘ್ಯ ಮುತ್ತು-ರತ್ನಗಳಿಗೆ ಪ್ರಚಾರ ದೊರೆತರೆ ನಮ್ಮಲ್ಲಿ ಮತ್ತೊಮ್ಮೆ ಆತ್ಮವಿಶ್ವಾಸ ಮೂಡಿ, ಇತರ ರಾಷ್ಟ್ರಗಳನ್ನು ಮೀರಿ ನಿಲ್ಲುವ ಸಾಮರ್ಥ್ಯ ನಮ್ಮದಾಗುತ್ತದೆ.

ಇಂಥ ಆತ್ಮಪ್ರತ್ಯಯವನ್ನು ಉದ್ದೀಪಿಸುವ ಕೆಲಸವನ್ನು ಈ ವಿಶ್ವ ಗೋ ಸಮ್ಮೇಳನವು ಯಶಸ್ವಿಯಾಗಿ ಮಾಡಿದೆ. ಬೃಹತ್ ಪ್ರಮಾಣದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದವರ ಸಂಖ್ಯೆ ಒಂದು ಲಕ್ಷವನ್ನೂ ಮೀರಿದೆ. ನಿರಂತರ ಒಂಬತ್ತು ದಿನಗಳ ಕಾರ್ಯಕ್ರಮಗಳನ್ನು ಬಹಳ ವಿಚಕ್ಷಣೆಯಿಂದ ರೂಪಿಸಲಾಗಿತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳು, ಭಜನೆ, ಪ್ರದರ್ಶನಗಳು, ಮಾಹಿತಿ ಕೇಂದ್ರಗಳು, ಚರ್ಚೆಗಳು, ಮಾರಾಟ ಕೇಂದ್ರಗಳು, ಮುಂತಾದ ವಿವಿಧ ಸೌಲಭ್ಯಗಳನ್ನು ಒದಗಿಸಿದ್ದರಿಂದ ಸಮ್ಮೇಳನದಲ್ಲಿ ಭಾಗವಹಿಸಿದವರೆಲ್ಲ ಸಂತೋಷಗೊಂಡಿದ್ದಾರೆ. ಬೃಹತ್ ಪ್ರಮಾಣದ ಇಂತಹ ಕಾರ್ಯಕ್ರಮದಲ್ಲಿ ಊಟತಿಂಡಿಯ ವ್ಯವಸ್ಥೆ, ವಸತಿ ಸೌಲಭ್ಯ, ನೀರಿನ ವ್ಯವಸ್ಥೆ ಇವೆಲ್ಲವನ್ನೂ ದೂರದ ಆ ಗ್ರಾಮೀಣ ಪ್ರದೇಶದಲ್ಲಿ ವ್ಯವಸ್ಥಿತವಾಗಿ ಒದಗಿಸಿ ಅದ್ಭುತ ಸಾಧನೆಯನ್ನು ಮಾಡಿರುವ ರಾಮಚಂದ್ರಾಪುರ ಮಠದ ಸ್ವಾಮಿಜಿಯವರಿಗೆ ಹಾಗೂ ಅವರ ಬೆಂಬಲಕ್ಕೆ ನಿಂತು ಸೇವೆ ಸಲ್ಲಿಸಿರುವ ಸಿಬ್ಬಂದಿ ವರ್ಗದವರಿಗೆ, ಭಕ್ತರಿಗೆ, ಕರ್ನಾಟಕದ ಜನತೆ ಆಭಾರಿಯಾಗಿರಬೇಕು.

ಗೋವುಗಳ ಸಂರಕ್ಷಣೆಯ ಸುಲಭ ವಿಧಾನ ಹಾಗೂ ಭಾರತೀಯ ತಳಿಗಳಲ್ಲಿರುವ ಸಹಜವೂ ಅಧಿಕವೂ ಆದ ರೋಗನಿರೋಧಕ ಶಕ್ತಿಯನ್ನು ಕಂಡು, ಕೇಳಿ, ನಮ್ಮ ದೇಶದವರು ಇನ್ನಾದರೂ ಕಣ್ಣು ತೆರೆದಾರು! ಈಗಾಗಲೇ ಕರ್ನಾಟಕವು ಹಾಲು ಉತ್ಪಾದನೆಯಲ್ಲಿ ಇಡೀ ರಾಷ್ಟ್ರಕ್ಕೇ ಎರಡನೆಯ ಸ್ಥಾನದಲ್ಲಿದೆ. ಈ ಸಮ್ಮೇಳನದಿಂದ ಉಂಟಾದ ಉತ್ಸಾಹ ಹಾಗೂ ಜ್ಞಾನದಿಂದ ನಮ್ಮ ರಾಜ್ಯವು ಶೀಘ್ರದಲ್ಲೇ ಪ್ರಥಮ ಸ್ಥಾನವನ್ನು ಗಳಿಸಿದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಒಂದು ಗೋವು ಮನೆಯಲ್ಲಿದ್ದರೆ, ಅದರಿಂದ ಎಷ್ಟು ಉಪಯೋಗ ಎಂಬುದನ್ನು ಮನವರಿಕೆ ಮಾಡಿಕೊಡುವುದೇ ಈ ಸಮ್ಮೇಳನದ ಉದ್ದೇಶವಾಗಿತ್ತು. ಪ್ರಾಣಿಗಳನ್ನು ಪಳಗಿಸುವುದನ್ನು ಕಲಿತ ಮಾನವ, ಗೋವನ್ನು ಮಾತೆಯೆಂದು ಕರೆದು ಗೋಸಂಪತ್ತಿನಲ್ಲಿ ತನ್ನ ಆರ್ಥಿಕ ಸ್ಥಿರತೆಯನ್ನು ಕಂಡುಕೊಂಡಿದ್ದ. ಸಾವಯವ ಕೃಷಿ, ಹೈನು ಉತ್ಪನ್ನಗಳು ಇವೇ ಅಂದಿನ ಜೀವನ ಶೈಲಿಯಾಗಿತ್ತು. ಆಧುನಿಕತೆಯ ಹೆಸರಿನಲ್ಲಿ ಇಂದು ಎಲ್ಲೆಡೆ ಬಳಸಲಾಗುತ್ತಿರುವ ವಿಷಪೂರಿತ ಕೀಟನಾಶಕಗಳು, ರಾಸಾಯನಿಕಗಳು ನೆಲ-ಜಲಗಳನ್ನು ಕಲುಷಿತಗೊಳಿಸುತ್ತಿವೆ. ವಿದೇಶಿ ಜಾಹಿರಾತುಗಳ ಅಬ್ಬರ ಹಾಗೂ ಆಕರ್ಷಣೀಯ ಬಣ್ಣಗಳಿಗೆ ಮಾರುಹೋಗಿ ಪರಿಸರದ ಮೇಲೆ ಮತ್ತು ಆರೋಗ್ಯದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ನಿರ್ಲಕ್ಷಿಸಿ, ನಮ್ಮ ಉತ್ತಮ ಅಂಶಗಳನ್ನು ಕೈಬಿಡುತ್ತಿದ್ದೇವೆ. 'ವಿದೇಶೀಯವೇ ಸೈ, ಭಾರತೀಯವೆಲ್ಲವೂ ನೈ' ಎಂದು ಆಧುನಿಕತೆಯ ಆಡಂಬರ ಮೆರೆಯುವವರು ಸ್ವಲ್ಪ ಎಚ್ಚೆತ್ತುಕೊಂಡರೆ ಪ್ರತಿ ಜಿಲ್ಲೆಯಲ್ಲೂ ಇಂತಹ ಕಾರ್ಯಕ್ರಮಗಳನ್ನು ಸರ್ಕಾರದ ಬೆಂಬಲದೊಂದಿಗೆ ಆಯೋಜಿಸಬಹುದು. ದೇಶದ ಸಂಪನ್ಮೂಲಗಳ ಸದುಪಯೋಗದ ಬಗ್ಗೆ ಮಾಹಿತಿ ನೀಡುವುದು ಸರ್ಕಾರದ ಹೊಣೆಯಾದರೂ ಅದು ಮಾಡದೇ ಇದ್ದದ್ದನ್ನು ಈ ಸ್ವಾಮಿಜಿಯವರು ಮಾಡಿತೋರಿಸಿರುವುದು ಅನುಕರಣೀಯವಾಗಿದೆ. ಔಷಧಿ ಸಂಪತ್ತು, ಖನಿಜ ಸಂಪತ್ತು ಹಾಗೂ ನಮ್ಮಲ್ಲಿರುವ ಪ್ರಾಣಿಪಕ್ಷಿಸಂಕುಲಗಳ ವೈವಿಧ್ಯತೆಗಳು ಇವುಗಳನ್ನು ಕುರಿತು ಹಾಗೂ ಅವುಗಳನ್ನು ಸಂರಕ್ಷಿಸುವ ವಿಧಾನಗಳ ಕುರಿತು ಇಂತಹ ಸಮ್ಮೇಳನಗಳು ಎಲ್ಲೆಡೆ ಆಗಿಂದಾಗ್ಗೆ ನಡೆಯಬೇಕು.